**ಪ್ರಸಾರವಾದ ಮತ್ತು ವಿತರಿಸಲಾದ ಶುಕ್ರವಾರದ ಪ್ರವಚನ (ಖುತ್ಬಾ)**

**ದಿನಾಂಕ: 07 ರಬೀಉಲ್ ಆಖರ್ 1448 ಹಿಜ್ರಿ / 18 ಸೆಪ್ಟೆಂಬರ್ 2026**

## ವಿಷಯ: ಮದುವೆ ಮತ್ತು ವಿಚ್ಛೇದನದಲ್ಲಿ (ತಲಾಕ್) ನುಸುಳಿರುವ ಅನ್ಯರ ಆಚಾರಗಳು

## ಮೊದಲನೇ ಪ್ರವಚನ:

**ಎಲ್ಲ ಪ್ರಶಂಸೆಗಳೂ ಅಲ್ಲಾಹನಿಗೆ ಮಾತ್ರ ಸಲ್ಲುತಕ್ಕದ್ದು. ನಾವು ಅವನನ್ನೇ ಸ್ತುತಿಸುತ್ತೇವೆ, ಅವನಲ್ಲೇ ಸಹಾಯವನ್ನು ಹಾಗೂ ಕ್ಷಮೆಯನ್ನು ಯಾಚಿಸುತ್ತೇವೆ. ನಮ್ಮ ಆತ್ಮಗಳ ಕೆಡುಕುಗಳಿಂದ ಮತ್ತು ದುಷ್ಕೃತ್ಯಗಳಿಂದ ಅಲ್ಲಾಹನಲ್ಲಿ ರಕ್ಷಣೆ ಬೇಡುತ್ತೇವೆ. ಅಲ್ಲಾಹನು ಯಾರಿಗೆ ಸನ್ಮಾರ್ಗ ತೋರುತ್ತಾನೋ ಅವನನ್ನು ದಾರಿ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ; ಮತ್ತು ಯಾರನ್ನು ದಾರಿ ತಪ್ಪಿಸುತ್ತಾನೋ ಅವನಿಗೆ ಸನ್ಮಾರ್ಗ ತೋರಲು ಯಾರಿಂದಲೂ ಸಾಧ್ಯವಿಲ್ಲ. ಅಲ್ಲಾಹನನ್ನು ಹೊರತುಪಡಿಸಿ ಆರಾಧನೆಗೆ ಅರ್ಹನಾದವನು ಬೇರಾರೂ ಇಲ್ಲ, ಅವನು ಏಕನು, ಅವನಿಗೆ ಯಾವುದೇ ಪಾಲುದಾರರಿಲ್ಲ ಎಂದೂ ಮುಹಮ್ಮದ್ ﷺ ಅವರು ಅಲ್ಲಾಹನ ದಾಸ ಮತ್ತು ಪ್ರವಾದಿಯಾಗಿದ್ದಾರೆ ಎಂದೂ ನಾನು ಸಾಕ್ಷಿ ಹೇಳುತ್ತೇನೆ. ಅವರು ಆತನ ಸಮಸ್ತ ಸೃಷ್ಟಿಗಳಲ್ಲಿ ಅತಿ ಶ್ರೇಷ್ಠರೂ ಅತ್ಯಂತ ಪ್ರಿಯರೂ ಆಗಿದ್ದಾರೆ. ಅವರು ನೀಡಲಾದ ಅಮಾನತ್ತನ್ನು ಅತ್ಯಂತ ಪ್ರಾಮಾಣಿಕತೆಯಿಂದ ತಲುಪಿಸಿದರು, ಪ್ರವಾದಿತ್ವದ ಸಂದೇಶವನ್ನು ಪ್ರಸರಿಸಿದರು, ಮತ್ತು ದೈವಿಕ ಮಾರ್ಗದಲ್ಲಿ ಅಂತಿಮ ಉಸಿರಿರುವವರೆಗೆ ಸತ್ಯದ ಪರವಾಗಿ ಸತತ ಹೋರಾಟ ನಡೆಸಿದರು. ಅಲ್ಲಾಹನು ಅವರ ಮೇಲೆಯೂ, ಅವರ ಪರಿವಾರದವರ ಮೇಲೆಯೂ ಮತ್ತು ಸಹಚರರ (ಸಹಾಬಿಗಳ) ಮೇಲೆಯೂ ಅನಂತ ಶುಭ ಹಾರೈಕೆ ಹಾಗೂ ಶಾಂತಿಯನ್ನು ಸುರಿಸಲಿ.**

**"ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಅಂಜಬೇಕಾದ ರೀತಿಯಲ್ಲಿ ಅಂಜಿರಿ ಮತ್ತು ಮುಸ್ಲಿಮರಾಗದ ಹೊರತು ಮರಣ ಹೊಂದಬೇಡಿರಿ." [ಕುರ್‌ಆನ್ - ಆಲ್ ಇಮ್ರಾನ್: 102]**

**ಅತ್ಯಂತ ಸತ್ಯವಾದ ಮಾತು ಅಲ್ಲಾಹನ ಗ್ರಂಥ (ಕುರ್‌ಆನ್) ಆಗಿದೆ ಮತ್ತು ಶ್ರೇಷ್ಠವಾದ ಮಾರ್ಗದರ್ಶನ ಮುಹಮ್ಮದ್ ﷺ ಅವರ ಮಾರ್ಗದರ್ಶನವಾಗಿದೆ. ಧರ್ಮದಲ್ಲಿ ಹೊಸದಾಗಿ ಸೇರಿಸಲಾದ ಪ್ರತಿಯೊಂದು ವಿಷಯವೂ ಕೆಡುಕಾಗಿದೆ, ಅಂತಹ ಪ್ರತಿಯೊಂದು ನವೀನತೆಯೂ ಅಧರ್ಮದ ಬಿದ್ ಅತ್ ಅಥವಾ ನವೀನಾಚಾರವಾಗಿದೆ, ಪ್ರತಿಯೊಂದು ಬಿದ್ ಅತ್ ದಾರಿಗೇಡಿತನವಾಗಿದೆ ಮತ್ತು ಪ್ರತಿಯೊಂದು ದಾರಿಗೇಡಿತನದ ಅಂತ್ಯ ನರಕವಾಗಿದೆ.**

**ಅಲ್ಲಾಹನ ದಾಸರೇ: ಓ ಮುಸ್ಲಿಮರೇ,**

**ಇಸ್ಲಾಮೀ ಶರೀಅತ್‌ನ ಮೂಲಭೂತ ನಿಯಮಗಳಲ್ಲಿ ಒಂದೆಂದರೆ - ಜನರ ಮೇಲಿನ ಶ್ರಮವನ್ನು ಸುಲಭಗೊಳಿಸುವುದು ಮತ್ತು ಅವರ ತೊಂದರೆಗಳನ್ನು ನೀಗಿಸುವುದು. ಕುರ್‌ಆನ್ ಮತ್ತು ಸುನ್ನತ್‌ನಲ್ಲಿ ಈ ವಿಷಯವನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.**

**ಅಲ್ಲಾಹು ಹೇಳುತ್ತಾನೆ: "ಅಲ್ಲಾಹು ನಿಮಗೆ ಸುಲಭವನ್ನು ಬಯಸುತ್ತಾನೆಯೇ ಹೊರತು ಕಷ್ಟವನ್ನು ಬಯಸುವುದಿಲ್ಲ." (ಅಲ್-ಬಖರ: 185)**

**ಮತ್ತು "ದೀನಿನಲ್ಲಿ (ಧರ್ಮದಲ್ಲಿ) ನಿಮಗೇನೂ ಕಷ್ಟವನ್ನು ಉಂಟುಮಾಡಿಲ್ಲ." (ಅಲ್-ಹಜ್ಜ್: 78)**

**ಪ್ರವಾದಿ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರ ಮಾರ್ಗದರ್ಶನವೂ ಇದರ ಮೇಲೆಯೇ ಆಧಾರಿತವಾಗಿತ್ತು. ಅವರಿಗೆ ಎರಡು ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡುವ ಅವಕಾಶ ಸಿಕ್ಕಾಗ, ಅದು ಪಾಪದ ಕೆಲಸವಾಗಿರದಿದ್ದರೆ, ಅವರು ಯಾವಾಗಲೂ ಸುಲಭವಾದದ್ದನ್ನೇ ಆಯ್ಕೆ ಮಾಡುತ್ತಿದ್ದರು. ಈ ನಿಯಮವು ಆರಾಧನೆ ಮತ್ತು ವ್ಯವಹಾರಗಳಿಗೆ ಮಾತ್ರವಲ್ಲದೆ, ಕುಟುಂಬದ ವಿಷಯಗಳಿಗೂ ಅತ್ಯಂತ ಅಗತ್ಯವಾಗಿದೆ. ಏಕೆಂದರೆ ಕುಟುಂಬವು ಸಮಾಜದ ಮೂಲಾಧಾರವಾಗಿದೆ. ಶರೀಅತ್ ತಂದಿರುವ ಸುಲಭತೆಯನ್ನು ಅಳವಡಿಸಿಕೊಂಡರೆ ಮನೆಗಳಲ್ಲಿ ಶಾಂತಿ ನೆಲೆಸುತ್ತದೆ, ಮದುವೆ ಸುಲಭವಾಗುತ್ತದೆ, ಖರ್ಚುಗಳು ಕಡಿಮೆಯಾಗುತ್ತವೆ ಮತ್ತು ವಿಚ್ಛೇದನದ ಸಮಯದಲ್ಲೂ ಹಕ್ಕುಗಳು ರಕ್ಷಿಸಲ್ಪಡುತ್ತವೆ. ಆದರೆ ಜನರು ಶರೀಅತ್‌ನ ಮಾರ್ಗದರ್ಶನವನ್ನು ಬಿಟ್ಟು, ಕೃತಕವಾದ ಆಚಾರಗಳು ಮತ್ತು ನುಸುಳಿದ ಸಂಪ್ರದಾಯಗಳನ್ನು ಅನುಸರಿಸಿದಾಗ, ಸುಲಭವು ಕಷ್ಟವಾಗಿ ಬದಲಾಗುತ್ತದೆ. ಅಲ್ಲಾಹು ನೆಮ್ಮದಿ ಮತ್ತು ಪ್ರೀತಿಗಾಗಿ ನೀಡಿದ ಮಾರ್ಗವು ಶ್ರಮ ಮತ್ತು ಜಗಳಕ್ಕೆ ಕಾರಣವಾಗುತ್ತದೆ.**

**ಓ ಸತ್ಯವಿಶ್ವಾಸಿಗಳೇ: ದುಃಖದ ವಿಷಯವೇನೆಂದರೆ, ಇಂದು ಕೆಲವು ಜನರು ಶರೀಅತ್‌ನ ನಿಯಮಗಳಿಗಿಂತ ಹೆಚ್ಚಾಗಿ ಸಾಮಾಜಿಕ ಆಚಾರ-ವಿಚಾರಗಳಿಗೆ ಪ್ರಾಮುಖ್ಯತೆ ನೀಡುತ್ತಿದ್ದಾರೆ. ಕೆಲವು ಕೆಟ್ಟ ಸಂಪ್ರದಾಯಗಳು ಸಮಾಜದಲ್ಲಿ ಹರಡಿಕೊಂಡಿದ್ದು, ಜನರು ಇವುಗಳನ್ನೇ ಧರ್ಮದ ಗ್ರಂಥಗಳಿಗಿಂತ ಮಿಗಿಲಾಗಿ ಕಾಣುತ್ತಿದ್ದಾರೆ. "ಜನರೆಲ್ಲರೂ ಹೀಗೆಯೇ ಮಾಡುತ್ತಿದ್ದಾರೆ" ಎಂಬ ನೆಪವನ್ನು ಹೇಳುತ್ತಾರೆ. ಆಶ್ಚರ್ಯದ ಸಂಗತಿಯೆಂದರೆ, ಜನರ ನಡವಳಿಕೆಯು ಸತ್ಯದ ಮಾನದಂಡವೇ?**

**ಅಲ್ಲಾಹು ಹೇಳುತ್ತಾನೆ: "ನೀವು ಭೂಮಿಯಲ್ಲಿರುವ ಬಹುಸಂಖ್ಯಾತರ ಮಾತು ಕೇಳಿದರೆ, ಅವರು ನಿಮ್ಮನ್ನು ಅಲ್ಲಾಹನ ಮಾರ್ಗದಿಂದ ದಾರಿ ತಪ್ಪಿಸುತ್ತಾರೆ." (ಅಲ್-ಅನ್ಆಮ್: 116)**

**ಕೆಲವರು ಸುನ್ನತ್‌ಗೆ ವಿರುದ್ಧವಾಗಿ ನಡೆದುಕೊಳ್ಳುವುದಕ್ಕಿಂತ ಹೆಚ್ಚಾಗಿ, "ಜನರು ಏನು ಅನ್ನುವರೋ" ಎಂದು ಭಯಪಡುತ್ತಾರೆ. "ಇದು ಅನಗತ್ಯ ಖರ್ಚು ಎಂದು ನನಗೆ ಗೊತ್ತು, ಆದರೆ ಜನರು ಏನು ಹೇಳುಬಹುದು?" ಎಂದು ಪ್ರತಿಯೊಬ್ಬರೂ ಯೋಚಿಸುತ್ತಾರೆ. ಈ ರೀತಿ ಜನರ ಅಭಿಪ್ರಾಯವೇ ಮನೆಗಳನ್ನು ಆಳುತ್ತಿದೆ.**

**ಅಬ್ದುಲ್ಲಾಹ್ ಬಿನ್ ಮಸ್ಊದ್ (ರ) ಅವರು ಹೇಳಿದರು: "ನಿಮ್ಮಲ್ಲಿ ಯಾರೂ 'ಇಮ್ಮಅಃ' (ಅಂಧಾನುಕರಣಿ) ಆಗಬಾರದು." ಜನರು, "ಇಮ್ಮಅಃ ಎಂದರೆ ಯಾರು?" ಎಂದು ಕೇಳಿದಾಗ, ಅವರು ಹೇಳಿದರು: "ಅವನು ಹೇಳುತ್ತಾನೆ: 'ನಾನು ಜನರ ಜೊತೆ ಇದ್ದೇನೆ, ಅವರು ಸರಿಯಾದ ದಾರಿಯಲ್ಲಿದ್ದರೆ ನಾನು ಸರಿಯಾದ ದಾರಿಯಲ್ಲಿರುತ್ತೇನೆ, ಅವರು ದಾರಿ ತಪ್ಪಿದರೆ ನಾನೂ ದಾರಿ ತಪ್ಪುತ್ತೇನೆ.' ಆದರೆ ಜನರು ಸತ್ಯವನ್ನು ತಿರಸ್ಕರಿಸಿದರೂ ನೀವು ಸತ್ಯದ ಮೇಲೆಯೇ ಸ್ಥಿರವಾಗಿರಬೇಕು."**

**ಅಲ್ಲಾಹು ಪತಿಗೆ ಮಹರ್ (ಮದುವೆಯ ಕೊಡುಗೆ) ನೀಡುವುದನ್ನು ಕಡ್ಡಾಯಗೊಳಿಸಿದ್ದಾನೆ ಮತ್ತು ಅದನ್ನು ಪತ್ನಿಯ ಸಂಪೂರ್ಣ ಹಕ್ಕನ್ನಾಗಿ ಮಾಡಿದ್ದಾನೆ.**

**ಅಲ್ಲಾಹು ಹೇಳುತ್ತಾನೆ: "ಮಹಿಳೆಯರಿಗೆ ಅವರ ಮಹರನ್ನು ಸಂತೋಷದಿಂದ ನೀಡಿರಿ." (ಅನ್ನಿಸಾ: 4)**

**ಮಹರ್ ಜೊತೆಗೆ ಪತ್ನಿಗೆ ಸಂತೋಷವನ್ನು ನೀಡಲು ಬಟ್ಟೆ, ಆಭರಣ ಅಥವಾ ಸುಗಂಧದ್ರವ್ಯಗಳಂತಹ ಸಣ್ಣ ಉಡುಗೊರೆಗಳನ್ನು ನೀಡುವುದು ಸಾಮಾನ್ಯವಾಗಿದೆ. ಆದರೆ ಇಂದು ನಮ್ಮ ಸಮಾಜದಲ್ಲಿ ಇದು ತನ್ನ ಮೂಲ ಉದ್ದೇಶವನ್ನು ಕಳೆದುಕೊಂಡು, ದುರಭ್ಯಾಸವಾಗಿ ಮಾರ್ಪಟ್ಟಿದೆ. ಸರಳವಾಗಿದ್ದ ಈ ಪದ್ಧತಿಯು ಇಂದು ಹಮ್ಮು-ಬಿಮ್ಮು, ದುರಾಡಂಬರ, ಮತ್ತು ಪರಸ್ಪರ ಸ್ಪರ್ಧೆಯ ಕ್ಷೇತ್ರವಾಗಿ ಬದಲಾಗಿದೆ. ಇಂತಹ ನಡವಳಿಕೆಗಳು ಶರೀಅತ್ ನೀಡಿರುವ ಸರಳತೆಯ ಆದೇಶಕ್ಕೆ ಮತ್ತು ದುರಾಡಂಬರ ಹಾಗೂ ಅಹಂಕಾರದ ವಿರುದ್ಧದ ಸಂದೇಶಕ್ಕೆ ಸಂಪೂರ್ಣ ವಿರುದ್ಧವಾಗಿವೆ.**

**ಆಯಿಶಾ (ರ) ಅವರಿಂದ ವರದಿಯಾಗಿದೆ, ಪ್ರವಾದಿ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಹೇಳಿದರು: "ಖಂಡಿತವಾಗಿಯೂ, ಹೆಣ್ಣಿನ ಮದುವೆಯ ನಿಶ್ಚಿತಾರ್ಥ, ಮಹರ್ ಮತ್ತು ಅವಳ ಗರ್ಭಧಾರಣೆಯು ಸುಲಭವಾಗಿರುವುದೇ ಅವಳ ಅದೃಷ್ಟ ಅಥವಾ ಬರಕತ್ ಆಗಿದೆ." (ಅಹ್ಮದ್)**

ಇಂದಿನ ಕಾಲದಲ್ಲಿ ಜನರಿಗೆ ಹೊರೆಯಾಗಿರುವ ಇನ್ನೊಂದು ವಿಷಯವೆಂದರೆ, ಮದುವೆಗೆ ಮುಂಚೆ ಮತ್ತು ನಂತರ ನಡೆಯುವ ಸಾಲು ಸಾಲು ಕಾರ್ಯಕ್ರಮಗಳು. ನಿಕಾಹ್ ಮುಗಿದ ತಕ್ಷಣ ಒಂದರ ನಂತರ ಒಂದರಂತೆ ಸಭೆಗಳು, ಔತಣಕೂಟಗಳು ಮತ್ತು ಆಚರಣೆಗಳು ಪ್ರಾರಂಭವಾಗುತ್ತವೆ. ಮದುವೆಯು ನಿರಂತರ ಖರ್ಚುಗಳ ಸರಪಳಿಯಾಗಿದೆ. ಸಂತೋಷವನ್ನು ವ್ಯಕ್ತಪಡಿಸುವುದು ಇಸ್ಲಾಮಿನಲ್ಲಿ ಸಮ್ಮತವಾಗಿದೆ, ಆದರೆ ತೊಂದರೆಯೆಂದರೆ ದುರಾಡಂಬರ ಮತ್ತು ಕೃತಕತೆ. ಇದನ್ನು ಮಾಡದಿದ್ದರೆ ಸಮಾಜದಲ್ಲಿ ಅಪಮಾನ ಎಂಬಂತೆ ಮಾಡಲಾಗಿದೆ. ಹೀಗೆ ಇಸ್ಲಾಮ್ ಸುಲಭಗೊಳಿಸಿದ ಸಂತೋಷವು ಕುಟುಂಬಗಳಿಗೆ ಆರ್ಥಿಕ ಹೊರೆಯಾಗಿ, ಯುವಕರ ಮದುವೆಯನ್ನು ವಿಳಂಬಗೊಳಿಸಿ, ಅವರನ್ನು ಸಾಲದ ಸುಳಿಯಲ್ಲಿ ಸಿಲುಕಿಸುತ್ತಿದೆ.

ಅನಸ್ (ರ) ಅವರಿಂದ ವರದಿಯಾಗಿದೆ: ಪ್ರವಾದಿ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರು ಅಬ್ದುರ್ರಹ್ಮಾನ್ ಬಿನ್ ಔಫ್ (ರ) ಅವರ ಮೇಲೆ ಹಳದಿ ಬಣ್ಣದ ಗುರುತನ್ನು ನೋಡಿ, "ಇದೇನು?" ಎಂದು ಕೇಳಿದರು. ಅವರು, "ನಾನು ಒಂದು ಖರ್ಜೂರದ ಬೀಜದಷ್ಟು ಚಿನ್ನವನ್ನು ಮಹರ್ ಆಗಿ ನೀಡಿ ಒಬ್ಬ ಮಹಿಳೆಯನ್ನು ಮದುವೆಯಾಗಿದ್ದೇನೆ" ಎಂದರು. ಆಗ ಪ್ರವಾದಿಯವರು: "ಅಲ್ಲಾಹು ನಿನಗೆ ಬರಕತ್ ನೀಡಲಿ. ಒಂದು ಕುರಿಯನ್ನಾದರೂ ಕೊಯ್ದು ವಲೀಮಾ (ಔತಣ) ನೀಡು" ಎಂದರು. (ಬುಖಾರಿ ಮತ್ತು ಮುಸ್ಲಿಮ್)

ಅಲ್ಲಾಹನು ನಮಗೂ ನಿಮಗೂ ಈ ಮಹಾನ್ ಕುರ್‌ಆನ್‌ನಲ್ಲಿ ಶುಭ ತರಲಿ, ಮತ್ತು ಇದರಲ್ಲಿರುವ ವಾಕ್ಯಗಳು ಹಾಗೂ ಉಪದೇಶಗಳಿಂದ ನಮಗೆ ಲಾಭವನ್ನು ತರಲಿ. ನಾನು ಈ ಮಾತನ್ನು ಹೇಳುತ್ತಾ, ನನಗಾಗಿ ಮತ್ತು ನಿಮಗಾಗಿ ಅಲ್ಲಾಹನಲ್ಲಿ ಕ್ಷಮೆಯಾಚಿಸುತ್ತೇನೆ. ನೀವೂ ಆತನಲ್ಲಿ ಕ್ಷಮೆಯಾಚಿಸಿ ಮತ್ತು ಆತನತ್ತ ಪಶ್ಚಾತ್ತಾಪಪಡಿ; ನಿಶ್ಚಯವಾಗಿಯೂ ಆತನು ಅತ್ಯಂತ ಕ್ಷಮಾದಾತನೂ ಕರುಣಾಮಯಿಯೂ ಆಗಿದ್ದಾನೆ.

## ಎರಡನೇ ಪ್ರವಚನ:

ಎಲ್ಲ ಪ್ರಶಂಸೆಗಳೂ ಅಲ್ಲಾಹನಿಗೆ ಮಾತ್ರ ಸಲ್ಲುತ್ತವೆ. ಆತನ ಅನುಗ್ರಹಗಳಿಗಾಗಿ ಸ್ತುತಿಗಳು, ಆತನ ಕೃಪೆಗೆ ಧನ್ಯವಾದಗಳು. ಆತನ ಸಂದೇಶ ಹಾಗೂ ಉದ್ದೇಶದ ಕಡೆಗೆ ಆಹ್ವಾನಿಸಿದ ಪ್ರವಾದಿ ಮುಹಮ್ಮದ್ ﷺ ಅವರ ಮೇಲೆಯೂ, ಅವರ ಪರಿವಾರದವರ ಹಾಗೂ ಸಹಚರರ ಮೇಲೆಯೂ ಅಂತಿಮ ದಿನದವರೆಗೆ ಅವರ ಮಾರ್ಗವನ್ನು ಅನುಸರಿಸುವ ಪ್ರತಿಯೊಬ್ಬರ ಮೇಲೆಯೂ ಶಾಂತಿ-ಸಮ್ಮಾನಗಳು ಸದಾ ಇರಲಿ.

**ಓ ಅಲ್ಲಾಹನ ದಾಸರೇ, ಅಲ್ಲಾಹನಿಗೆ ಹೆದರಿ ಜೀವಿಸಿರಿ. ರಹಸ್ಯದಲ್ಲೂ ಬಹಿರಂಗದಲ್ಲೂ ಆತನನ್ನು ಸ್ಮರಿಸಿರಿ, ಮತ್ತು ನೀವೆಲ್ಲರೂ ಆತನ ಬಳಿಗೇ ಮರಳಬೇಕಾಗಿದೆ ಎಂಬುದನ್ನು ನೆನಪಿನಲ್ಲಿಡಿರಿ.**

**ಸಹೋದರರೇ! ಮದುವೆಯಲ್ಲಿ ಹೇಗೆ ಅನ್ಯ ಆಚಾರಗಳು ನುಸುಳಿ ಜನರಿಗೆ ಹೊರೆಯಾಗಿದೆಯೋ, ಹಾಗೆಯೇ ವಿಚ್ಛೇದನದಲ್ಲೂ (ತಲಾಕ್) ಹೊಸ ರೀತಿಯ ದುರಾಚಾರಗಳು ಸೇರಿಕೊಂಡು ಅದರ ಶರೀಅತಿನ ಉದ್ದೇಶವನ್ನು ಹಾಳುಮಾಡಿವೆ. ಇಸ್ಲಾಮಿನಲ್ಲಿ ತಲಾಕ್ ಅಗತ್ಯವಿದ್ದಾಗ ಸಮ್ಮತವಾಗಿದ್ದರೂ, ಅದು ಒಮ್ಮೆ ಪ್ರೀತಿ ಮತ್ತು ಕರುಣೆಯಿಂದ ಕೂಡಿದ್ದ ಸಂಬಂಧದ ಅಂತ್ಯವಾಗಿದೆ. ಆದ್ದರಿಂದ ಶರೀಅತ್ ಅದನ್ನು ಗೌರವ, ಹಕ್ಕುಗಳ ರಕ್ಷಣೆ ಮತ್ತು ಸೇಡು ತೀರಿಸಿಕೊಳ್ಳದಿರುವ ಮೌಲ್ಯಗಳಿಂದ ಕೂಡಿದೆ.**

**ಆದರೆ ಈ ವಿಷಯದಲ್ಲಿ ಇತ್ತೀಚೆಗೆ ಬಂದಿರುವ ಅತ್ಯಂತ ಕೆಟ್ಟ ಆಚಾರವೆಂದರೆ "ತಲಾಕ್ ಪಾರ್ಟಿ ಅಥವಾ ಆಚರಣೆ" (Divorce Party). ಕುಟುಂಬವೊಂದು ಒಡೆಯುವ, ಮಕ್ಕಳು ಸಂಕಟಪಡುವ ಮತ್ತು ವೇದನೆಯಿರುವ ಕ್ಷಣವನ್ನು ಆಚರಣೆ ಮತ್ತು ಸಂತೋಷದ ಸಂದರ್ಭವಾಗಿ ಮಾಡಲಾಗುತ್ತದೆ! ಮುಸ್ಲಿಂ ಕುಟುಂಬವೊಂದು ನಾಶವಾಗುವುದು ಸಂತೋಷದ ವಿಷಯವೇ? ಇದು ಇಸ್ಲಾಮೀ ಶರೀಅತಿನ ಮೂಲ ಉದ್ದೇಶಕ್ಕೆ ಸಂಪೂರ್ಣ ವಿರುದ್ಧವಾಗಿದೆ.**

**ಅಲ್ಲಾಹು ಹೇಳುತ್ತಾನೆ: "ಒಂದೋ ಒಳ್ಳೆಯ ರೀತಿಯಲ್ಲಿ ಜೊತೆಯಾಗಿ ಬಾಳಿರಿ, ಇಲ್ಲವೇ ಉತ್ತಮ ರೀತಿಯಲ್ಲಿ ಬೇರ್ಪಡಿರಿ." (ಅಲ್-ಬಖರ: 229)**

**ಬೇರ್ಪಡುವಿಕೆಯನ್ನು ಆರ್ಭಟದ ಆಚರಣೆಗಳಿಂದ ಸ್ವೀಕರಿಸುವುದು ಅಥವಾ ಪರಸ್ಪರ ದ್ವೇಷ ಸಾಧಿಸುವುದು ಇಸ್ಲಾಮೀ ರೀತಿಯಲ್ಲ. ಬದಲಾಗಿ, ಗೌರವ, ರಕ್ಷಣೆ, ಹಕ್ಕುಗಳ ಪಾಲನೆ ಮತ್ತು ಮಕ್ಕಳ ಮೇಲಿನ ಕರುಣೆಯೊಂದಿಗೆ ಜೀವನದ ಆ ಅಧ್ಯಾಯವನ್ನು ಮುಕ್ತಾಯಗೊಳಿಸಬೇಕು.**

**ಜಾಬಿರ್ (ರ) ವರದಿ ಮಾಡುತ್ತಾರೆ, ಪ್ರವಾದಿ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಹೇಳಿದರು: "ಇಬ್ಲೀಸ್ (ಸೈತಾನ) ತನ್ನ ಸಿಂಹಾಸನವನ್ನು ನೀರಿನ ಮೇಲಿಡುತ್ತಾನೆ. ನಂತರ ತನ್ನ ಸೈನ್ಯವನ್ನು ಜನರನ್ನು ದಾರಿ ತಪ್ಪಿಸಲು ಕಳುಹಿಸುತ್ತಾನೆ. ಅವರಲ್ಲಿ ಯಾರು ಅತಿ ದೊಡ್ಡ ಫಿತ್ನಾ (ಗೊಂದಲ ಅಥವಾ ಪಾಪ) ಮಾಡುತ್ತಾನೋ ಅವನು ಸೈತಾನನಿಗೆ ಅತ್ಯಂತ ಹತ್ತಿರದವನಾಗುತ್ತಾನೆ. ಒಬ್ಬ ಸೈತಾನ ಬಂದು 'ನಾನು ಇಂತಿಂತಹ ಪಾಪ ಮಾಡಿಸಿದೆ' ಎಂದರೆ, ಇಬ್ಲೀಸನು 'ನೀನೇನೂ ಮಾಡಲಿಲ್ಲ' ಅನ್ನುತ್ತಾನೆ. ನಂತರ ಇನ್ನೊಬ್ಬ ಬಂದು 'ನಾನು ಗಂಡ-ಹೆಂಡತಿಯ ನಡುವೆ ಬೇರ್ಪಡಿಸಿದ್ದೇನೆ ಅಥವಾ ತಲಾಕ್ ಉಂಟುಮಾಡುವವರೆಗೂ ಅವರನ್ನು**

**ಬಿಡಲಿಲ್ಲ' ಎಂದಾಗ, ಇಬ್ಲೀಸನು ಅವನನ್ನು ತನ್ನ ಹತ್ತಿರಕ್ಕೆ ಕರೆದು 'ನೀನು ಅತ್ಯುತ್ತಮ ಕೆಲಸ ಮಾಡಿದೆ' ಎಂದು ಹೇಳಿ ಅಪ್ಪಿಕೊಳ್ಳುತ್ತಾನೆ." (ಮುಸ್ಲಿಮ್)**

**ಸೈತಾನನಿಗೆ ಇಷ್ಟವಾಗುವ ವಿಷಯವನ್ನು ಒಬ್ಬ ಮನುಷ್ಯನು ಹೇಗೆ ಆಚರಿಸಲು ಸಾಧ್ಯ?! ಈ ಆಚಾರವು ನಮ್ಮಲ್ಲಿ ಹೆಚ್ಚು ಪ್ರಸಿದ್ಧವಾಗಿಲ್ಲದಿದ್ದರೂ, ಕೆಲವು ಸಮಾಜಗಳಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಹರಡುತ್ತಿದೆ.**

**ಶುಭ್ರ ಮನಸ್ಸಿನವರೇ! ಮದುವೆ ಮತ್ತು ವಿಚ್ಛೇದನಗಳು ಜೀವನದ ಅತ್ಯಂತ ಪ್ರಮುಖ ವಿಷಯಗಳಾಗಿವೆ. ಇವುಗಳನ್ನು ಇಸ್ಲಾಮ್ ಜನರ ಇಷ್ಟಾನಿಷ್ಟಗಳಿಗೆ ಅಥವಾ ಬದಲಾಗುವ ಆಚಾರಗಳಿಗೆ ಬಿಟ್ಟಿಲ್ಲ. ಬದಲಾಗಿ ಧರ್ಮ ಮತ್ತು ಕುಟುಂಬವನ್ನು ರಕ್ಷಿಸುವ ನಿಯಮಗಳನ್ನು ನೀಡಿದೆ. ಶರೀಅತಿಗೆ ಸೂಕ್ತವಾದ ಸಂಪ್ರದಾಯಗಳು ಸ್ವೀಕಾರಾರ್ಹ, ಆದರೆ ಶರೀಅತ್‌ಗೆ ವಿರುದ್ಧವಾದ ಆಚಾರಗಳು ಎಷ್ಟೇ ಹಳೆಯದಾಗಿದ್ದರೂ ಅವುಗಳಿಗೆ ಬೆಲೆಯಿಲ್ಲ.**

**ಆದ್ದರಿಂದ, ನಿಮ್ಮ ಯುವಕರಿಗೆ ಮದುವೆಯನ್ನು ಸುಲಭಗೊಳಿಸಿ. ಅಲ್ಲಾಹು ವಿಧಿಸದ ವೆಚ್ಚಗಳನ್ನು ಅವರ ಮೇಲೆ ಹೇರಬೇಡಿ. ಒಂದು ವೇಳೆ ತಲಾಕ್ ಸಂಭವಿಸಿದರೆ, ಅದು ಹಠ ಅಥವಾ ಸೇಡಿನಿಂದ ಅಲ್ಲದೆ, ಸೌಜನ್ಯದಿಂದ ಇರಲಿ.**

**ಅಲ್ಲಾಹನ ಈ ಮಾತನ್ನು ನೆನಪಿನಲ್ಲಿಡಿ: "ಮತ್ತು ನಿಮ್ಮ ನಡುವಿನ ಉದಾರತೆಯನ್ನು (ಒಳ್ಳೆಯತನವನ್ನು) ಮರೆಯಬೇಡಿ." (ಅಲ್-ಬಖರ: 237)**

**ಯಾ ಅಲ್ಲಾಹ್, ನಮ್ಮ ಮನಸ್ಸಿಗೆ ಈಮಾನ್ ಅಥವಾ ಸತ್ಯವಿಶ್ವಾಸವನ್ನು ಇಷ್ಟವಾಗಿಸು ಮತ್ತು ಅದನ್ನು ನಮ್ಮ ಹೃದಯಗಳಲ್ಲಿ ಸುಂದರಗೊಳಿಸು. ಅಧರ್ಮ, ಪಾಪ ಹಾಗೂ ಅನಾದರಗಳನ್ನು ನಮಗೆ ಅಪ್ರಿಯಗೊಳಿಸು. ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಯುವವರನ್ನಾಗಿ ಮಾಡು. ಇಸ್ಲಾಂ ಮತ್ತು ಮುಸ್ಲಿಮರಿಗೆ ಘನತೆಯನ್ನು ತಂದುಕೊಡು. ಓ ಅಲ್ಲಾಹ್, ಕುವೈತ್ ದೇಶವನ್ನು ಮತ್ತು ಅದರ ಜನರನ್ನು ಎಲ್ಲ ಕೆಡುಕುಗಳಿಂದ ಕಾಯ್ದಿರಿಸು. ಈ ದೇಶವನ್ನು ಮತ್ತು ಇತರ ಎಲ್ಲ ಮುಸ್ಲಿಂ ದೇಶಗಳನ್ನು ಶಾಂತಿ-ನೆಮ್ಮದಿಯ ಧಾಮವನ್ನಾಗಿ ಮಾಡು. ನಮ್ಮ ಗಡಿ ಕಾಯುವ ಸೈನಿಕರನ್ನು ಮತ್ತು ದೇಶದ ಸುರಕ್ಷತೆಗೆ ಶ್ರಮಿಸುವವರನ್ನು ರಕ್ಷಿಸು. ನಮ್ಮ ಆಡಳಿತಗಾರರಿಗೆ ಮತ್ತು ಅವರ ಉತ್ತರಾಧಿಕಾರಿಗಳಿಗೆ ನಿನ್ನ ಮೆಚ್ಚುಗೆಯ ದಾರಿಯಲ್ಲಿ ನಡೆಯಲು ತೌಫೀಕ್ ನೀಡು. ನಮ್ಮ ಕೊನೆಯ ಪ್ರಾರ್ಥನೆ: ಎಲ್ಲ ಪ್ರಶಂಸೆಗಳೂ ಸರ್ವಲೋಕಗಳ ಒಡೆಯನಾದ ಅಲ್ಲಾಹನಿಗೆ ಮಾತ್ರ ಸಲ್ಲಿಕೆ.**